# ಹಿರಿಯ ಸಿವಿಲ್ ನ್ಯಾಯಾಧೀಶರು  ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,  ತಿ.ನರಸೀಪುರ

**ಸಿಸಿ ಸಂಖ್ಯೆ 199/2020**

CW–3/PW–4

| | | |
|---|---|---|
| ಹೆಸರು | : | ಶಿವಣ್ಣ |
| ತಂದೆ/ಗಂಡನ ಹೆಸರು | : | ಕಾಳಯ್ಯ |
| ವಯಸ್ಸು | : | 54 ವರ್ಷ |
| ವೃತ್ತಿ | : | ಪೌರಕಾರ್ಮಿಕ |
| ವಾಸ ಸ್ಥಳ | : | ಪುರಸಭೆ, ತಿ.ನರಸೀಪುರ |
| ದಿನಾಂಕ | : | **14-11-2022** |

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನಾನು ತಿ.ನರಸೀಪುರದ ಪುರಸಭೆಯಲ್ಲಿ ಪೌರಕಾರ್ಮಿಕನಾಗಿ ಕಳೆದ 15 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ–1 ಮತ್ತು 2 ರವರು ಗೊತ್ತು. ದಿನಾಂಕ 04/01/2019 ರಂದು ನನ್ನನ್ನು ಮತ್ತು ಚಾಸಾ–1 ಮತ್ತು 2 ರವರನ್ನು ಸ್ವಚ್ಛತೆ ಕೆಲಸ ಮಾಡುವಂತೆ ತಿ.ನರಸೀಪುರದ ತ್ರಿವೇಣಿ ನಗರದ ವಾರ್ಡ್ ನಂ.5 ಕ್ಕೆ ನೇಮಕ ಮಾಡಿದ್ದರು. ಆ ದಿವಸ ನಾನು ಮತ್ತು ಚಾಸಾ–1 ರವರು ಅಕ್ಕಪಕ್ಕದ ಮೋರಿಗಳನ್ನು ಸ್ವಚ್ಛ ಮಾಡುತ್ತಿದ್ದೆವು. ಆ ದಿವಸ ಬೆಳಗ್ಗಿನ 6 ಗಂಟೆಗೆ ಕೆಲಸ ಮಾಡಲೆಂದು ನಾವುಗಳು ಹೋಗಿದ್ದೆವು. ಬೆಳಗ್ಗಿನ ಸುಮಾರು 8.30 ಅಥವಾ 9 ಗಂಟೆ ಸುಮಾರಿಗೆ ಒಬ್ಬರು ಚಾಸಾ–1 ರವರ ಜೊತೆಗೆ ಗಲಾಟೆ ಮಾಡುತ್ತಿದ್ದಾರೆ ಮತ್ತು ಅವರನ್ನು ಹೊಡೆಯುತ್ತಿದ್ದಾರೆ ಎಂದು ಯಾರೋ ಒಬ್ಬ ಸಾರ್ವಜನಿಕರು ತಿಳಿಸಿದರು. ವಿಷಯ ತಿಳಿದು ನಾನು ಘಟನಾ ಸ್ಥಳಕ್ಕೆ ಓಡಿಹೋದೆನು. ನಾನು ಸ್ಥಳಕ್ಕೆ ಹೋದಾಗ ನ್ಯಾಯಾಲಯದಲ್ಲಿರುವ ಆರೋಪಿತರು ಚಾಸಾ–1 ರವರನ್ನು ಹೊಡೆಯುತ್ತಿದ್ದರು. ಅದೇ ರೀತಿ ಚಾಸಾ–1 ರವರ ಮುಖವನ್ನು ಪರಚಿದ್ದರು ಮತ್ತು ಬಟ್ಟೆಯನ್ನು ಹರಿದಿದ್ದರು. ಅದೇ ರೀತಿ ಆರೋಪಿತರು ಚಾಸಾ–1 ರವರನ್ನು ಬಾಯಿಗೆ ಬಂದ ಹಾಗೆ ಬೋಳಿ

ಮಗನೇ ಇತ್ಯಾದಿಯಾಗಿ ಬೈಯುತ್ತಿದ್ದರು. ಆರೋಪಿತರು ಚಾಸಾ–1 ರವರಿಗೆ ಕೈಯಿಂದಲೇ ಹೊಡೆದರು. ಆ ಸಮಯದಲ್ಲಿ ನಾನು ಮತ್ತು ಚಾಸಾ–2 ರವರು ಧಾವಿಸಿ ಚಾಸಾ–1 ಮತ್ತು ಆರೋಪಿತರನ್ನು ಬೇರ್ಪಡಿಸಿದೆವು. ಮೋರಿಯನ್ನು ಸ್ವಚ್ಛಗೊಳಿಸುವ ವಿಚಾರದಲ್ಲಿ ಮೋರಿಯ ನೀರು ಆರೋಪಿತರ ಮನೆಯ ಬಾಗಿಲ ಮುಂದೆ ಬೀಳುತ್ತಿದೆ ಎನ್ನುವ ಕಾರಣಕ್ಕೆ ಗಲಾಟೆಯಾಗಿದೆ ಎಂದು ತಿಳಿದು ಬಂದಿದೆ. ನಂತರ ತಿ.ನರಸೀಪುರ ಪುರಸಭೆಯ ಮುಖ್ಯಾಧಿಕಾರಿಗಳಿಗೆ ಕರೆಮಾಡಿ ವಿಷಯವನ್ನು ತಿಳಿಸಿದೆವು. ಆನಂತರ ಚಾಸಾ–1 ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ತದನಂತರ ಚಾಸಾ–1 ರವರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ.

ಆ ದಿವಸ ಚಾಸಾ–1 ರವರ ಜೊತೆಗೆ ಗಲಾಟೆ ಮಾಡಿದ ವ್ಯಕ್ತಿ ಈಗ ನ್ಯಾಯಾಲಯದಲ್ಲಿರುವ ಆರೋಪಿತರೇ ಆಗಿರುತ್ತಾರೆ. ಈ ಘಟನೆಯ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

ಘಟನೆಯಾದ ದಿವಸವೇ ಮಧ್ಯಾಹ್ನ 1 ಗಂಟೆ ಸುಮಾರಿಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು. ಪೊಲೀಸರಿಗೆ ಚಾಸಾ–1 ಇವರು ಘಟನಾ ಸ್ಥಳವನ್ನು ತೋರಿಸಿದರು. ಪೊಲೀಸರು ಸ್ಥಳದಲ್ಲಿ ಬರವಣಿಗೆ ಮಾಡಿಕೊಂಡು ನನ್ನ ಸಹಿ ಪಡೆದರು. ನಾನು ಈಗ ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಆರೋಪಿತರು ಚಾಸಾ–1 ರವರ ಜೊತೆಗೆ ಗಲಾಟೆ ಮಾಡಿ ಹೊಡೆದಿದ್ದರಿಂದ ಸರ್ಕಾರಿ ಕೆಲಸಕ್ಕೆ ಅಡ್ಡಿವುಂಟಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಗೆ ಭಾಗಶಃ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿದ್ದಾರೆ ಎಂದು ಹೇಳಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರವರು ಅನುಮತಿಯನ್ನು ಕೇಳಿರುತ್ತಾರೆ. ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಘಟನೆಯ ದಿವಸ ಆರೋಪಿತರು ಚಾಸಾ–1 ರವನ್ನು ಅಡ್ಡಗಟ್ಟಿ ನಿಲ್ಲಿಸಿದರು ಎಂದರೆ ನಿಜ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ.ಕೆ. ವಕೀಲರಿಂದಃ**

ಚಾಸಾ-1 ರವರನ್ನು ಸುಮಾರು 9.30 ಅಥವಾ 10 ಗಂಟೆಗೆ ಪುರಸಭೆಯ ವಾಹನದಲ್ಲಿಯೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಆ ಸಮಯದಲ್ಲಿ ನಮ್ಮ ಸಿಬ್ಬಂದಿಯವರು ಸುಮಾರು 16 ಜನರು ಆಸ್ಪತ್ರೆಗೆ ಹೋಗಿದ್ದೆವು. ಆ ಸಮಯದಲ್ಲಿ ಚಾಸಾ-1 ರವರು ನಡೆದಾಡುವ ಸ್ಥಿತಿಯಲ್ಲಿ ಇರಲಿಲ್ಲ. ಚಾಸಾ-1 ರವರು ಆ ದಿವಸ ಆಸ್ಪತ್ರೆಯಲ್ಲಿ ಮಧ್ಯಾಹ್ನ 12.30 ರವರೆಗೆ ಇದ್ದರು. ನಾನು ಚಾಸಾ-1 ರವರ ಜೊತೆಗೆ ಆಸ್ಪತ್ರೆಯಲ್ಲಿ 12 ಗಂಟೆಯವರೆಗೆ ಇದ್ದು ತದನಂತರ ನನ್ನ ಕೆಲಸಕ್ಕೆಂದು ಹೋಗಿರುತ್ತೇನೆ. ಆ ದಿವಸ ನಾನು ಪಕ್ಕದ ಬೀದಿಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದರೆ ನಿಜ. ನನ್ನ ಜೊತೆ ಚಾಸಾ-2 ಮಹದೇವ ಕೆಲಸ ಮಾಡುತ್ತಿದ್ದರು. ನಾನು ಮತ್ತು ಚಾಸಾ-1 ರವರು ಅಕ್ಕಪಕ್ಕದ ಬೀಗಳಲ್ಲಿಯೇ ಕೆಲಸ ಮಾಡುತ್ತಿದ್ದರಿಂದ ನಮ್ಮಿಬ್ಬರ ಮಧ್ಯ ಸುಮಾರು 10 ಮೀಟರ್ ಮಾತ್ರ ಅಂತರವಿತ್ತು . ನಾನು ಮತ್ತು ಚಾಸಾ-1 ರವರು ಕೆಲಸ ಮಾಡುತ್ತಿದ್ದ ಸ್ಥಳಗಳ ಮಧ್ಯ ಮನೆಗಳು ಇದ್ದವು. ಒಂದು ಬೀದಿಯಿಂದ ಇನ್ನೊಂದು ಬೀದಿಗೆ ಬರಬೇಕಾದರೆ ಬಳಸಿಕೊಂಡು ಬರಬೇಕು ಎಂದರೆ ನಿಜ. ಆದರೆ ಅಷ್ಟೇನೂ ದೂರದಿಂದ ಬಳಸಿಕೊಂಡು ಬರಬೇಕಾಗಿಲ್ಲ.

ಗಲಾಟೆಯ ವಿಷಯವನ್ನು ಸಾರ್ವಜನಿಕರು ನನಗೆ ತಿಳಿಸಿರುತ್ತಾರೆ. ನಾನು ಕೆಲಸ ಮಾಡುತ್ತಿದ್ದ ಸ್ಥಳದಿಂದ ಘಟನಾ ಸ್ಥಳಕ್ಕೆ ಸುಮಾರು 10 ನಿಮಿಷದಲ್ಲಿಯೇ ನಾನು ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಚಾಸಾ-1 ಕೆಳಕ್ಕೆ ಬಿದ್ದಿದ್ದನು ಮತ್ತು ಆರೋಪಿತನು ಆತನ ಮೇಲೆ ಇದ್ದನು. ಆರೋಪಿತನು ಚಾಸಾ-1 ರವರನ್ನು ಬೈಯುವುದನ್ನು ನಾನು ಕೇಳಿಸಿಕೊಂಡಿರುತ್ತೇನೆ. ಮೋರಿಯ ನೀರಿನ ವಿಚಾರವಾಗಿ ಗಲಾಟೆಯಾಗಿದೆ ಎಂದು ನಾನು ಕೇಳಿ ತಿಳಿದುಕೊಂಡಿದ್ದೇನೆ. ಗಲಾಟೆಯ ಸಮಯದಲ್ಲಿ ಆರೋಪಿತರು ಮತ್ತು ಅವರ ತಾಯಿ ಇದ್ದರು. ಆ ಸಮಯದಲ್ಲಿ ಅಕ್ಕ-ಪಕ್ಕದ ಮನೆಗಳ ಜನರೂ ಕೂಡ ಘಟನೆಯನ್ನು ನೋಡುತ್ತಿದ್ದರು.

ಚಾಸಾ-1 ರವರು ಕೆಲಸ ಮಾಡುತ್ತಿದ್ದಾಗ ಮದ್ಯಸೇವನೆ ಮಾಡಿದ್ದರು ಎಂದರೆ ಸುಳ್ಳು. ಮದ್ಯದ ಅಮಲಿನಲ್ಲಿ ಆರೋಪಿತರ ತಾಯಿಗೆ ಚಾಸಾ-1 ರವರು ಏಕವಚನದಲ್ಲಿ ಮಾತನಾಡಿದಾಗ ಆರೋಪಿತರು ಕೇಳಲು ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ-1 ರವರೇ ಆರೋಪಿತರನ್ನು ಹೊಡೆಯಲು ಹೋಗಿ ಆಯತಪ್ಪಿ ಬಿದ್ದು ಗಾಯಗೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವುಗಳೆಲ್ಲ ಬಂದು ಆರೋಪಿತರನ್ನು ಹೊಡೆದು ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಘಟನೆಯ ನಂತರ ನನ್ನನ್ನು ಕೂಡ ಪೊಲೀಸ್ ಠಾಣೆಗೆ ಕರೆದಿದ್ದರು ಎಂದರೆ ಸುಳ್ಳು.

ನಾನು ಹೇಳುವಂತೆ ಯಾವುದೇ ಘಟನೆ ಆಗದೇ ಇದ್ದರೂ ಕೂಡ ಮದ್ಯಸೇವನೆಯ ಅಮಲಿನಲ್ಲಿ ಚಾಸಾ–1 ರವರು ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ ಎಂದರೆ ಸರಿಯಲ್ಲ. ಬೇರೆಯವರ ಮಾತನ್ನು ಕೇಳಿ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಈ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೌರಕಾರ್ಮಿಕನಾಗಿರುವುದರಿಂದ ಪೊಲೀಸರ ಜೊತೆಗೆ ಚನ್ನಾಗಿ ಪರಿಚಯ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನಾನು, ನಮ್ಮ ಕಛೇರಿಯವರು ಮತ್ತು ಪೊಲೀಸರು ಎಲ್ಲರೂ ಸೇರಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಯಾವುದೇ ಸ್ಥಳಕ್ಕೆ ಹೋಗದೇ ಠಾಣೆಯಲ್ಲಿಯೇ ತಯಾರಿಸಿದ ನಿ.ಪಿ.2 ಮಹಜರಿಗೆ ಸಹಿ ಮಾತ್ರ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಪೌರಕಾರ್ಮಿಕರ ಸಂಘದ ಸದಸ್ಯರೆಲ್ಲ ಸೇರಿಕೊಂಡು ಪೊಲೀಸರ ಮೇಲೆ ಒತ್ತಡ ತಂದು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರು ಚಾಸಾ–1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.